# ಮೇಲೊಂದು ಗರುಡ ಹಾರುತಿಹುದು...

**ಗಾಂಧಿಯನ್ನು ಪ್ರತಿಮೆಯಲ್ಲಿ, ಸ್ವಾತಂತ್ರ್ಯ ಹೋರಾಟದ ನೆನಪಿನಲ್ಲಿ, ಬಿಳಿ ಟೋಪಿಯಲ್ಲಿ, ಚರಕ – ನೂಲಿನಲ್ಲಿಯಷ್ಟೇ ಹುಡುಕಬೇಕೇ? ನಮ್ಮ ಸುತ್ತಲಿನ ಸಮಾಜದಲ್ಲಿ ಅನುದಿನದ ಜೀವನವನ್ನು ದಿಟ್ಟ ನೈತಿಕಪ್ರಜ್ಞೆಯೊಂದಿಗೆ ಎದುರಿಸುತ್ತಿರುವ ಜೀವಗಳಲ್ಲಿ, ನಮ್ಮೊಳಗೇ ಇರುವ ಆತ್ಮಸಾಕ್ಷಿಯ ಭಿತ್ತಿಯಲ್ಲಿ ಇರುವುದು ಗಾಂಧಿಯ ಛಾಯೆಯೇ ಅಲ್ಲವೇ?**




■ ಮಂಜುಳಾ ಹಿರೇಮಠ

ಗಣಿತ ಶಿಕ್ಷಕಿ – ಕವಯಿತ್ರಿ


ಏಳನೇ ತರಗತಿಯಲ್ಲಿ ಕಲಿಯುತ್ತಿದ್ದ ಚಿಕ್ಕ ಹುಡುಗಿ ಆಕೆ. ಎಂದಿನಂತೆ ಆ ದಿನವೂ ಶಾಲೆ ಮುಗಿಸಿ ಮನೆಗೆ ಬಂದೊಡನೆ ಅವಳ ತಾಯಿ, ತುರ್ತಾಗಿ ಬೇಕಾಗಿದ್ದ ಕೆಲವು ದಿನಸಿ ಸಾಮಾನುಗಳನ್ನು ತರುವಂತೆ ಮಗಳಿಗೆ ಹೇಳಿದಳು. ತನಗಾದ ಬೇಸರವನ್ನು, ತನ್ನ ಹೆಜ್ಜೆಗಳನ್ನು ಜೋರಾಗಿ ನೆಲಕ್ಕೆ ಅಪ್ಪಳಿಸುವುದರ ಮೂಲಕ ವ್ಯಕ್ತಪಡಿಸುತ್ತ ಶೆಟ್ಟರ ಅಂಗಡಿಗೆ ಹೊರಟಳು ಹುಡುಗಿ.

ದೊಡ್ಡ ಸಂಖ್ಯೆಯಲ್ಲಿದ್ದ ಗ್ರಾಹಕರನ್ನು ತಾವೊಬ್ಬರೇ ನಿಭಾಯಿಸುತ್ತಿದ್ದ ಶೆಟ್ಟರು, ಅವಸರಕ್ಕೆ ಒಳಗಾಗಿಯೋ ಅಥವಾ ಮೈಮರೆವೆಯಿಂದಲೋ ಆ ಹುಡುಗಿಗೆ ದಿನಸಿ ಕೊಟ್ಟಾದ ಮೇಲೆ ಹಣ ಪಡೆದು ಚಿಲ್ಲರೆ ವಾಪಸು ಕೊಡುವಾಗ ನೂರು ರೂಪಾಯಿ ಹೆಚ್ಚಿಗೆ ಕೊಟ್ಟುಬಿಟ್ಟರು. ಚುರುಕಾಗಿದ್ದ ಆ ಹುಡುಗಿ ತಕ್ಷಣ ಅದನ್ನು ಗುರುತಿಸಿದಳು. ಆ ಕ್ಷಣಕ್ಕೆ ಅವಳ ತಲೆ ಗೊಂದಲದ ಗೂಡಾಯಿತು. ಶೆಟ್ಟರಿಗೆ ಆ ಹಣವನ್ನು ವಾಪಾಸು ಮಾಡುವುದೋ ಅಥವಾ ತಾನೇ ಇಟ್ಟುಕೊಳ್ಳುವುದೋ ಎನ್ನುವ ಜಿಜ್ಞಾಸೆ ಕಾಡಿದಂತಾಗಿ ಕೊನೆಯಲ್ಲಿ ಆಸೆಯ ಪೊರೆ ಮೆತ್ತಿಕೊಂಡ ಮನಸ್ಸು ಹತ್ತಾರು ಸಮರ್ಥನೆಗಳನ್ನು ಆತ್ಮಸಾಕ್ಷಿಯ ಮುಂದಿಟ್ಟು ಅದರ ಬಾಯಿ ಮುಚ್ಚಿಸಿತು. ಹುಡುಗಿ ಶೆಟ್ಟರಿಗೆ ಏನೊಂದೂ ಹೇಳದೆ ತನ್ನ ಮನೆಯ ದಾರಿ ಹಿಡಿದಳು.

ದಿನಸಿಯ ಬೆಲೆಯನ್ನು ಕಳೆದು ಬಾಕಿ ಉಳಿದ ಚಿಲ್ಲರೆಯನ್ನಷ್ಟೇ ಅಮ್ಮನಿಗೆ ಕೊಟ್ಟು ಆ ನೂರು ರೂಪಾಯಿ ನೋಟನ್ನು ಬೆಕ್ಕಿನ ಹೆಜ್ಜೆ ಇಡುತ್ತ ನಡೆದು ತನ್ನ ಶಾಲೆಯ ಬ್ಯಾಗಿನೊಳಗೆ ಬಚ್ಚಿಟ್ಟಳು. ಇನ್ನು ಆ ರಾತ್ರಿಯೆಲ್ಲ ಆಕೆಯ ಮನಸ್ಸು ಕಳ್ಳು ಕುಡಿದ ಕಪಿಯ ಮನಸ್ಸಿನಂತೆ, ಆ ಹಣದಲ್ಲಿ ಏನೇನು ತಿನ್ನಬಹುದು ಏನೆಲ್ಲ ಕೊಳ್ಳಬಹುದು ಎನ್ನುವ ಲೆಕ್ಕಾಚಾರಗಳಲ್ಲಿ ಮುಳುಗಿ ಹೋಗಿತ್ತು.

ಕೊರೊನಾ ನಿಯಂತ್ರಣಕ್ಕಾಗಿ ಸರ್ಕಾರ ಹೇರಿದ್ದ ನಿರ್ಬಂಧಗಳನ್ನು ವಿರೋಧಿಸಿ ಕಳೆದ ಆಗಸ್ಟ್ 30ರಂದು ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಕಾಣಿಸಿದ ಗಾಂಧಿ ಬಿಂಬ. ವಿಶ್ವದಾದ್ಯಂತ ನಡೆಯುವ ಅನೇಕ ಪ್ರತಿಭಟನೆ–ಚಳವಳಿಗೆ ಈಗಲೂ ಗಾಂಧಿಯೇ ಸ್ಫೂರ್ತಿ.

